**ಸಿವಿಲ್ ಜಡ್ಜ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ., ಹಿರೇಕೆರೂರು.**

**ಸಿ.ಸಿ ನಂಬರ್ಃ 05/2024**

**ಪಿರ್ಯಾದಿಃ** ಸರ್ಕಾರ, ಪ್ರತಿನಿಧಿಸುವವರು, ಪ್ರತಿನಿಧಿಸುವವರು
ಹಂಸಭಾವಿ ಪೊಲೀಸ್ ಠಾಣಾ ಪೋಲೀಸರು.

**-ವಿರುದ್ಧ-**

**ಆರೋಪಿಃ** 1) ಬಸವರಾಜ ತಂದೆ ಮಂಜಪ್ಪ ತಿಮ್ಮಾಪುರ,
ಉದ್ಯೋಗಃ ಚಾಲಕ, ವಾಸಃ ಬ್ಯಾತನಾಳ,
ತಾಃ ಹಾನಗಲ್, ಹಾವೇರಿ ಜಿಲ್ಲೆ.

2) ಇಮ್ತಿಯಾಜ್ ತಂದೆ ಶಂಶಿರಸಾಬ ಮಕಾಂದಾರ,
ಉದ್ಯೋಗಃ ಗೌಂಡಿ, ವಾಸಃ ಹಿರೇಕೆರೂರ,
ತಾಃ ಹಿರೇಕೆರೂರ, ಹಾವೇರಿ ಜಿಲ್ಲೆ.

**ಆಪಾದನೆ**

ನಾನು ಶ್ರೀಮತಿ ನಾಗರತ್ನಮ್ಮ ದಿವಾಣಿ ಮತ್ತು ಜೆ.ಎಮ್.ಎಫ್,ಸಿ ನ್ಯಾಯಾಲಯ, ಹಿರೇಕೆರೂರು, ಆರೋಪಿತರಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆ,

1. ದಿನಾಂಕಃ 09.02.2023 ರಂದು ಸಂಜೆ 6.45 ಗಂಟೆಗೆ ಹಂಸಬಾವಿ ಪೋಲಿಸ್ ಠಾಣಾ ಹದ್ದಿ ಪೈಕಿ ಕೋಡ-ರಾಣೇಬೆನ್ನೂರ ರಸ್ತೆಯ ಮೇಲೆ ಕೋಡ ಗ್ರಾಮದ ಕೆರೆ ಏರಿಯ ಮೇಲೆ ಪ್ರದೀಪ ದೊಡ್ಡಗೌಡ ಪಾಟೀಲ ಇವರ ಮನೆಯ ಹತ್ತಿರ ಆರೋಪಿತರ ಪೈಕಿ 1 ನೇ ಆರೋಪಿಯಾದ ನೀವು ನಿನ್ನ ಅಶೋಕ ಲೈಲ್ಯಾಂಡ್ ಗೂಡ್ಸ ಗಾಡಿ ನಂಃ ಕೆಎ-27/ಸಿ-2480 ನೇದ್ದನ್ನು ಅತೀ ಜೋರಿನಿಂದ ಮತ್ತು ನಿರ್ಲಕ್ಷತನದಿಂದ ರಾಣೇಬೆನ್ನೂರು ಕಡೆಯಿಂದ ಚಲಾಯಿಸಿಕೊಂಡು ಬಂದು ನಿನ್ನ ಎದುರಿಗೆ ಹೋಗುತ್ತಿದ್ದ ಮೋಟಾರ ಸೈಕಲ್ ನ್ನು ಓವರ್ ಟೇಕ್ ಮಾಡಲು ನಿನ್ನ ಎಡಸೈಡಿನಿಂದ ಒಮ್ಮಿಂದೊಮ್ಮೆಲೆ ಬಲಸೈಡಿಗೆ ತೆಗೆದುಕೊಂಡು ನಿನ್ನ ಎದುರಿನಿಂದ ಅಂದರೆ ಕೋಡದ ಕಡೆಯಿಂದ ಪ್ರಕರಣದ ಮೃತ ಮಾರತಿ ಇವರು ಚಾಸಾ-8 ನೇದವರನ್ನು ಕೂರಿಸಿಕೊಂಡು ಬರುತ್ತಿದ್ದ ಮೋಟಾರ ಸೈಕಲ್ ನಂಃಕೆಎ-27/ಇಜೆ-6985 ನೇದ್ದಕ್ಕೆ ಡಿಕ್ಕಿ ಪಡಿಸಿ ಹಾಗೂ ನಿನ್ನ ಎದುರಿಗೆ ರಾಣೇಬೆನ್ನೂರು ಕಡೆಯಿಂದ ಕೋಡ ಕಡೆಗೆ ಪ್ರಕರಣದ ಗಾಯಾಳು ಚಾಸಾ-9 ರವರು ಚಾಸಾ-1 ನೇದವರನ್ನು ಕೂರಿಸಿಕೊಂಡು ಬರುತ್ತಿದ್ದ ಮೋಟಾರ ಸೈಕಲ್ ನಂಃ ಕೆಎ-14/ಇಬಿ-6914 ನೇದ್ದಕ್ಕೆ ಹಿಂದಿನಿಂದ ಡಿಕ್ಕಿ ಪಡಿಸಿ ಅಪಘಾತ ಪಡಿಸಿರುತ್ತೀರಿ. ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ 279 ರ ಕೆಳಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ ಎಂದು ಆಪಾಧಿಸಲಾಗಿದೆ?

ಮೇಲೆ ಹೇಳಿದ ದಿನಾಂಕ ಹಾಗೂ ಸಮಯದಲ್ಲಿ ಆರೋಪಿತರ ಪೈಕಿ 1 ನೇ ಆರೋಪಿಯಾದ ನೀವು ಆ ರೀತಿ ಅಪಘಾತ ಪಡಿಸಿದ ಪರಿಣಾಮ ಚಾಸಾ-1 ಮತ್ತು 9 ನೇದವರಿಗೆ ಮೈಕೈಗೆ ಕಾಲುಗಳಿಗೆ ಸಾದಾ ಸ್ವರೂಪದ ಗಾಯ ಪಡಿಸಿಕೊಂಡಿರುತ್ತೀರಿ. ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ 337 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ ಎಂದು ಆಪಾಧಿಸಲಾಗಿದೆ?

ಮೇಲೆ ಹೇಳಿದ ದಿನಾಂಕ ಹಾಗೂ ಸಮಯದಲ್ಲಿ ಆರೋಪಿತರ ಪೈಕಿ 1 ನೇ ಆರೋಪಿಯಾದ ನೀವು ಆ ರೀತಿ ಡಿಕ್ಕಿ ಪಡಿಸಿದ ಪರಿಣಾಮ ಚಾಸಾ-1 ಮತ್ತು 9 ನೇದವರಿಗೆ ಮೈಕೈಗೆ ಕಾಲುಗಳಿಗೆ ಹಾಗೂ ಮೃತನಿಗೆ ಮೈಕೈಗೆ, ತಲೆಗೆ ಹಾಗೂ ಕಾಲಿಗೆ ಮತ್ತು ಚಾಸಾ-8 ನೇದವರಿಗೆ ಕಾಲಿಗೆ ಮತ್ತು ಬಲಕಾಲಿಗೆ ಹಾಗೂ ಮೈಕೈಗೆ ಭಾರೀ ಸ್ವರೂಪದ ಗಾಯ ಪಡಿಸಿಕೊಂಡಿರುತ್ತೀರಿ. ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ 338 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ ಎಂದು ಆಪಾಧಿಸಲಾಗಿದೆ?

ಮೇಲೆ ಹೇಳಿದ ದಿನಾಂಕ ಹಾಗೂ ಸಮಯದಲ್ಲಿ ಆರೋಪಿತರ ಪೈಕಿ 1 ನೇ ಆರೋಪಿಯಾದ ನೀವು ಆ ರೀತಿ ಅಪಘಾತ ಪಡಿಸಿದ ಪರಿಣಾಮ ಗಾಯಗೊಂಡಿದ್ದ ಮೃತ ಮಾರುತಿ ತಂದೆ ನಾಗಪ್ಪ ಇವರು ರಾಣೇಬೆನ್ನೂರಿನ ಶಿವಂ ಆಸ್ಪತ್ರೆಯಲ್ಲಿ ಉಪಚಾರದಲ್ಲಿದ್ದಾಗ ರಾತ್ರಿ 9.00 ಗಂಟೆಗೆ ಉಪಚಾರ ಫಲಿಸದೇ ಮೃತ ಪಡುವಂತೆ ಮಾಡಿರುತ್ತೀರಿ. ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ 304(ಎ) ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ ಎಂದು ಆಪಾಧಿಸಲಾಗಿದೆ?

ಮೇಲೆ ಹೇಳಿದ ದಿನಾಂಕ ಹಾಗೂ ಸಮಯದಲ್ಲಿ ಆರೋಪಿತರ ಪೈಕಿ 1 ನೇ ಆರೋಪಿಯಾದ ನೀವು ಅಪಘಾತದಲ್ಲಿ ಗಾಯಗೊಂಡಿದ್ದ ಗಾಯಾಳುಗಳನ್ನು ಉಪಚರಿಸದೇ, ಅಪಘಾತದ ವಿಚಾರವನ್ನು ಹತ್ತಿರದ ಪೋಲಿಸ್ ಠಾಣೆಗೆ ತಿಳಿಸದೇ ಸ್ಥಳದಿಂದ ಓಡಿ ಹೋಗಿರುತ್ತೀರಿ . ಆ ಮೂಲಕ 134(ಎ)(ಬಿ) ಸಹ ಕಲಂ 187 ಮೋಟಾರ ವಾಹನ ಕಾಯ್ದೆ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ ಎಂದು ಆಪಾಧಿಸಲಾಗಿದೆ?

ಮೇಲೆ ಹೇಳಿದ ದಿನಾಂಕ ಹಾಗೂ ಸಮಯದಲ್ಲಿ 2 ನೇ ಆರೋಪಿಯಾದ ನೀವು ನಿಮ್ಮ ಮೋಟಾರ ಸೈಕಲ್ ನಂಃ ಕೆಎ-14/ಇಬಿ-6914 ನೇದಕ್ಕೆ ಅಪಘಾತದ ಕಾಲಕ್ಕೆ ನಿಮ್ಮ ವಾಹನಕ್ಕೆ ವಿಮೆಯನ್ನು ಮಾಡಿಸದೇ ವಾಹನವನ್ನು ಚಾಲನೆ ಮಾಡಿರುತ್ತೀರಿ. ಆ ಮೂಲಕ ನೀವು 03 ಸಹ ಕಲಂ 181 ಮೋಟಾರ ವಾಹನ ಕಾಯ್ದೆ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ ಎಂದು ಆಪಾಧಿಸಲಾಗಿದೆ?

ಮೇಲೆ ಹೇಳಿದ ದಿನಾಂಕ ಹಾಗೂ ಸಮಯದಲ್ಲಿ 2 ನೇ ಆರೋಪಿಯಾದ ನೀವು ನಿಮ್ಮ ಮೋಟಾರ ಸೈಕಲ್ ನಂಃ ಕೆಎ-14/ಇಬಿ-6914 ನೇದಕ್ಕೆ ಅಪಘಾತದ ಕಾಲಕ್ಕೆ ನಿಮ್ಮ ವಾಹನಕ್ಕೆ ಡಿ.ಎಲ್ ಇಲ್ಲದೇ ವಾಹನವನ್ನು ಚಾಲನೆ ಮಾಡಿರುತ್ತೀರಿ. ಆ ಮೂಲಕ ನೀವು 146 ಸಹ ಕಲಂ 196 ಮೋಟಾರ ವಾಹನ ಕಾಯ್ದೆ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ ಎಂದು ಆಪಾಧಿಸಲಾಗಿದೆ?

ಸದರಿ ಮೇಲೆ ಹೋರಿಸಿದ ಆಪಾದನೆಯನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿದ್ದರಿಂದ ಅವು ಈ ನ್ಯಾಯಾಲಯದಿಂದ ವಿಚಾರಣೆ ಆಗತಕ್ಕದ್ದು ಅಂತಾ ಆದೇಶ ಮಾಡಿರುತ್ತೇನೆ.

ಹಿರೇಕೆರೂರು ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಮ್‌ಎಫ್‌ಸಿ
ದಿನಾಂಕ: 09.09.2025 ಹಿರೇಕೆರೂರು.